ರಾಣೆಬೆನ್ನೂರು ಟೌನಿನಲ್ಲಿ ಘೋಷಿಸಲ್ಪಟ್ಟಿರುವ ಕೊಳಚೆ ಪ್ರದೇಶಗಳು ಮತ್ತು ಅವುಗಳಿಗೆ ಒದಗಿಸಿರುವ ಮೂಲಭೂತ ಸೌಕರ್ಯಗಳನ್ನು ಕುರಿತು.

೧೧೭೪ ಶ್ರೀ ಕೆ.ಬಿ. ಕೋಳಿವಾಡ್, ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ರಾಣೆಬೆನ್ನೂರು ಟೌನಿನಲ್ಲಿ ಇರುವ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ಮತ್ತು ಯಾವುವು.

ಬಿ) ಘೋಷಿತ ಕೊಳಚೆ ಪ್ರದೇಶವನ್ನು ಕರ್ನಾಟಕ ನಿರ್ಮೂಲನ ಮಂಡಳಿಯು ತೆಗೆದುಕೊಂಡ ಕೆಲಸಗಳ ವಿವರಗಳೇನು?

ಸಿ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಡಿ) ಪ್ರಸ್ತುತ ವರ್ಷದಲ್ಲಿ ಯಾದರೂ ಈ ಕೊಳಚೆ ಪ್ರದೇಶಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳುವ ಪ್ರಸ್ತಾಪ ಸರ್ಕಾರಕ್ಕಿದೆಯೆ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಎ) ರಾಣೆಬೆನ್ನೂರು ಟೌನಿನಲ್ಲಿ ೩ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಲಾಗಿದೆ. ಅವಾವುವೆಂದರೆ—

೧) ಸುಣಗಾರಕೇರಿ ಕೊಳಚೆ ಪ್ರದೇಶ.

೨) ಮೂಡಲಮನೆ ಕೊಳಚೆ ಪ್ರದೇಶ.

೩) ಪೂನಾ–ಬೆಂಗಳೂರು ರಸ್ತೆಯ ಉತ್ತರ ಭಾಗದ ಕೊಳಚೆ ಪ್ರದೇಶ.

ಬಿ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಈ ಕೆಳಗಿನ ಕೊಳಚೆ ಪ್ರದೇಶಗಳಿಗೆ ಕೆಲವು ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ.

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)	ನೀಡಲಾದ ಸೌಕರ್ಯಗಳು
೧)	ಸುಣಗಾರಕೇರಿ ಕೊಳಚೆ ಪ್ರದೇಶ	೦.೫೬	ಚರಂಡಿ, ಬೀದಿ ದೀಪ
೨)	ಮೂಡಲಮನೆ ಕೊಳಚೆ ಪ್ರದೇಶ	೧.೦೪	ಚರಂಡಿ, ಬೀದಿ ದೀಪ
೩)	ಪೂನ–ಬೆಂಗಳೂರು ರಸ್ತೆಯ ಉತ್ತರ ಭಾಗದ ಕೊಳಚೆ ಪ್ರದೇಶ.	೦.೩೬	ಚರಂಡಿ, ಮಂಚಂಕೇಸಿಂಗ್

ಸಿ) ಮೇಲೆ ಹೇಳಿದ ಕಾರಣಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಡಿ) ಉದ್ಭವಿಸುವುದಿಲ್ಲ.

ಪಾಲೇಕರ್ ಐತೀರ್ಪು ಬಗ್ಗೆ

೬೨೬. ಶ್ರೀಮತಿ ಮುಕ್ತಾರ್ ಉನ್ನಿಸ.—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪತ್ರಕರ್ತರಿಗೆ ಪಾಲೇಕರ ಐತೀರ್ಪು ನೀಡುವ ಕರ್ನಾಟಕದಲ್ಲಿಯ ಒಟ್ಟು ಪತ್ರಿಕೆಗಳ ಸಂಖ್ಯೆ

ಆ) ಐತೀರ್ಪು ಜಾರಿಗೊಳಿಸದಿದ್ದ ಪತ್ರಿಕೆಗಳ ವಿರುದ್ಧ ಕ್ರಮಕೈಗೊಂಡಿದೆಯೆ

ಇ) ರಾಜ್ಯದಲ್ಲಿ ಪತ್ರಕರ್ತರಿಗೆ ಅನ್ಯಾಯ ಒದಗದಂತೆ ಸರ್ಕಾರವು 'ಪಾಲೀಕರ್ ಏತೀರ್ಪು ಕಾವಲು ಸಮಿತಿ' ರಚಿಸಿದೆಯೇ?

ಈ) ಪತ್ರಕರ್ತರ ಹಾಗೂ ಆಡಳಿತ ವರ್ಗದವರ ಮೇಲೆ ಸರ್ಕಾರವು ನಿಯಮಿತವಾಗಿ ಪರಿಶೀಲಿಸುತ್ತಿದೆಯೆ

ಉ) ಹಾಗಿದ್ದಲ್ಲಿ ಶೋಧಿಸಿದ ಒಟ್ಟು ಸಂಖ್ಯೆ ತಪ್ಪಿತಸ್ಥರು, ಹಾಗೂ ಅಂಥವರ ಮೇಲೆ ಕ್ರಮ ಕೈಗೊಂಡ ಸಂಖ್ಯೆ?

ಶ್ರೀ ಡಿ. ಮಂಜುನಾಥ (ಮಾನ್ಯ ಕಾರ್ಮಿಕ ಸಚಿವರು).—

ಅ) ೫೩ ವೃತ್ತ ಪತ್ರಿಕೆಗಳು.

ಆ) ಏತೀರ್ಪುಗಳನ್ನು ಆಚರಣೆಗೆ ತರಲು ಸತತವಾಗಿ ಆಡಳಿತ ವರ್ಗದವರನ್ನು ಒತ್ತಾಯಿಸಲಾಗುತ್ತಿದೆ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಕಂದಾಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕಂಥ ಎರಡು ನೋಟಿಫಿಕೇಷನ್‌ಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸಭೆಯ ಮುಂದೆ ಇಡಲಿಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಪರದಿಯನ್ನೊಪ್ಪಿಸುವುದು

ಶ್ರೀ ಎಸ್.ಕೆ. ಕಾಂತಾ.—ಅಧ್ಯಕ್ಷರೇ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಶಿಫಾರಸ್ಸಿನ ಮೇಲೆ ಸರ್ಕಾರದವರು ಕೈಗೊಂಡ ಕ್ರಮದ ಬಗ್ಗೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯು ೨೩ನೇ ವರದಿಯನ್ನು ನಾನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಗಿದೆ.

ಪ್ರಕಟಣೆ

ಅಧ್ಯಕ್ಷರು.—ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟ್, ಬೆಂಗಳೂರು ಇವರಿಂದ ಈ ಕೆಳಕಂಡ ಸಂದೇಶಗಳು ನನಗೆ ಬಂದಿವೆ.

(೧) ವಿಧಾನಸಭಾ ಸದಸ್ಯರಾದ ಶ್ರೀ ಪಂಪಾಪತಿಯವರನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ದಾವಣಗೆರೆಯಲ್ಲಿ ದಿನಾಂಕ ೨೬ನೇ ಫೆಬ್ರುವರಿ, ೧೯೮೬ರಂದು ಬೆಳಿಗ್ಗೆ ಬಂಧಿಸಿ ದಾವಣಗೆರೆ ರೈಲ್ವೆ ಪೋಲೀಸ್ ಠಾಣೆಯಲ್ಲಿಟ್ಟುಕೊಂಡಂ ಅದೇ ದಿನ ಬಿಡುಗಡೆ ಮಾಡಲಾಯಿತು.